
ಹೇಳಿದಳು. ಮಹಾಂತೇಶನ ಮುಖದಲ್ಲಿ ಖುಷಿ ಉಕ್ಕಿತು. 'ನೀನೇ ಒಂದು ಗಳಿಗೆ ಗೌರ್ನಮೆಂಟ್ ಹಾಸ್ಪೆಟಲ್ ಹತ್ರ ಹೋಗಿ ಬಾ, ಯಾರಾದ್ರೂ ಹೇಳ್ತಾರೆ. ನಾನು ಹೋಗಿ ಕೇಳಕಾತದ?' ಉತ್ತರಿಸಿದ. ರಕ್ತವೇನು ಮೈಮೂಳೆಗಳು ಹೀರಿಕೊಳ್ಳುವ ಎತ್ತಿನ ಕೆಲಸ, ಸಮಯವೆಲ್ಲಿದೆ, ಆದರೂ ಮರುಮಾತನಾಡದೆ, 'ಹ್ಞೂಂ, ಸರಿ.' ತಲೆಯಾಡಿಸಿದಳು. ಹಣಕ್ಕೆ ಏನು ಮಾಡಿಕೊಳ್ಳುತ್ತಾಳೆ ಎಂಬ ಪರಿವಿಯೇ ಇಲ್ಲದೆ ಮಹಾಂತೇಶ ಮದ್ಯ ಗುಟುಕರಿಸುತ್ತಲಿದ್ದ. ದಿಲ್‌ರುಬಾ ಏನು ಮಾಡುತ್ತಿರಬಹುದು, ಥೂ ಹಾಳಾದ್ದು ಈ ಹೊತ್ತಿನಲ್ಲಿ ಅವಳ ನೆನಪು ಯಾಕೆ? ಅವಳು ಏನು ಬೇಕಾದರೂ ಸಾಧಿಸುವ ಛಲದವಳು, ಗುರಿದಾರಿಗಳ ಬಗ್ಗೆ ಮತ್ತೆ ಮತ್ತೆ ಯೋಚಿಸಬಲ್ಲಳು. ಸಲೀಮನ ಹಿಂದೆ ಹೋಗುತ್ತಿರುವುದು ಅವನ ಜೊತೆ ಬಾಳ್ವೆ ಮಾಡೋದಕ್ಕಲ್ಲ, ಈ ನರಕದಿಂದ ತಪ್ಪಿಸಿಕೊಳ್ಳುವುದಕ್ಕೆ ಎಂದು ಭೀಮವ್ವಳಲ್ಲಿ ಹೇಳಿಕೊಂಡಿದ್ದ ಕನಲಿಕೆ.



ನಸುಕಿನಲ್ಲಿ ಹತ್ತಿ ತೋಟದ ಕಡೆ ಸೈಕಲ್ ಹೊಡೆಯತೊಡಗಿದಳು ಭೀಮವ್ವ. ಇವೊತ್ತು ಏನೇನೋ ಬಿಕ್ಕಳಿಕೆ, ತಳಮಳ... ಎಂದೂ ಇಲ್ಲದ್ದು. ಇಷ್ಟೊತ್ತಿಗಾಗಲೇ ಉಳಿದ ಕೂಲಿಯಾಳುಗಳು ತೋಟದಲ್ಲಿ ಕಲೆತಿರುತ್ತಾರೆ. ಚೀಲದಲ್ಲಿ ಹಣ ಭದ್ರವಾಗಿದೆ, ಮತ್ತೆ ಮತ್ತೆ ಮುಟ್ಟಿ ನೋಡಿಕೊಳ್ಳುತ್ತಿರುವಳು. ರೊಟ್ಟಿ ತಿನ್ನುವ ಸಮಯದಲ್ಲಿ ಆಸ್ಪತ್ರೆಗೆ ಹೋಗಿ ಜೈಪುರ ಕಾಲಿಗೆ ಹಣ ಕಟ್ಟಿಬಂದರಾಯ್ತು. ಆಕಾಶ ಇನ್ನೂ ಬೆಳಕಿನ ಪರದೆಯನ್ನು ಬಿಚ್ಚಿರಲಿಲ್ಲ, ಆದರೂ ಮಬ್ಬು ಸುಖದಾಯಕವಾಗಿರಲಿಲ್ಲ. ಗಾಳಿಗೀಳು ಮಾತ್ರ ಬಿಡದೆ ದೇಹದೊಳಗೆ ನುಸುಳುತ್ತಿತ್ತು ಸ್ಥಳಾವಕಾಶ ಮಾಡಿಕೊಂಡು. ದೂರದೂರುಗಳಿಂದ ಬರುವವರು ಟೆಂಪೋ ಟ್ರ್ಯಾಕ್ಸ್ ಮಾಡಿಕೊಂಡು ಬಂದಿರುವರು, ಮಾಲೀಕನ ಚೇಲಾಗಳ ಕೂಗುಗಳು ತೋಳಗಳ ಕೂಗನ್ನು ಹಿಮ್ಮೆಟ್ಟಿಸುವಂತಿದ್ದವು. ಸ್ವಾಮಿನಿಷ್ಠೆಗೆ ಬದ್ಧರು, ಹೆಣ್ಣುಗಳು ಮೈಮಾಟಗಳ ಕುರಿತು ನೆದರಿಲ್ಲ. ಇಷ್ಟು ಟನ್ ಹತ್ತಿ ಬಿಡಿಸಿ ಟ್ರಕ್ ತುಂಬಬೇಕೆಂದರೆ ತುಂಬಲೇಬೇಕೆನ್ನುವುದು ಕಟ್ಟುನಿಟ್ಟು ನಿಯಮ. ಕಿಚಾಯಿಸಿ, ಅವಮಾನಿಸಿ ಮಾತನಾಡುವ ಬಾಬತ್ತು ಇಲ್ಲ. ಸಂಜೆ ಮಾತ್ರ ಮದ್ಯ ಹೀರಿಕೊಳ್ಳುತ್ತಾರೆ, ಅದಾಗಲೇ ಕೊಂಚಮಟ್ಟಿಗೆ ಧೃತಿಗೆಡಬಲ್ಲರು. ಏಕೆಂದರೆ ಅವರು ಹೆಣ್ಣಾಳುಗಳ ಪಾದಗಳಿಗೆ ಮುಳ್ಳುಗಳು ಚುಚ್ಚಿಕೊಂಡರೆ ಕನಿಕರ ಬೀರುವರು. ಬದುವಿನೊಳಗೆ ಸೈಕಲ್ ನಿಲ್ಲಿಸಿ, ಅಂಗಿಯನ್ನು ಮೈಮೇಲೆಳೆದುಕೊಂಡು ದೌಡಾಯಿಸತೊಡಗಿದಳು, ಸಹವರ್ತಿಗಳೊಂದಿಗೆ ಕಸುಬಿಗಿಳಿಯಲು. ಹತ್ತಿ ಬಿಡಿಸುತ್ತಾ ಅಕ್ಕಪಕ್ಕದವರನ್ನು ದಿಟ್ಟಿಸಿ ನೋಡಿದಳು, ಎಲ್ಲರೂ ಎಂದಿನಂತೆ ಉತ್ಸಾಹಭರಿತರಾಗಿ ಕೆಲಸದಲ್ಲಿ ಮಗ್ನರಾಗಿದ್ದರು. ತನಗ್ಯಾಕೆ ಈ ದಿನ ಇಷ್ಟೊಂದು ರೋಗರುಜಿನವಾಗಿ ತೋರುತ್ತಿರುವುದು! ಇವಳು ಕೂಡ ಚನ್ನವ್ವನಾಗುವ ಧಾವಂತ ಅಷ್ಟೊಂದು ಸುಲಭಸಾಧ್ಯವೇ?

ಕತ್ತಲೆ ಕಳೆದು ಮತ್ತೊಂದು ಸರದಿಯ ಚರಿತ್ರಾರ್ಹ ಕತ್ತಲು ಹೆಬ್ಬಾವಿನಂತೆ ಇವರನ್ನೆಲ್ಲ ಸುತ್ತುವರಿದು ನುಂಗತೊಡಗಿತ್ತು. ಅದೇ ವ್ಯಾನ್ ಇವರನ್ನೆಲ್ಲ ಹತ್ತಿಸಿಕೊಂಡು ಗುಡ್ಡಗಾಡು ಮಾರ್ಗದಲ್ಲಿ ಗುಡುಗುಡನೆ ಚಲಿಸುತ್ತಿತ್ತು. ಮಹಾಂತೇಶನ ಜೈಪುರ ಕಾಲಿಗೆ ಹಣ ಕೊಡುವುದನ್ನು ಮಾತ್ರ ತಪ್ಪಿಸಿರಲಿಲ್ಲ. ವೀರೇಂದ್ರ ಕುಲಕರ್ಣಿ ಹಿಂದಿನ ಸಂಜೆ ಕೈ ತುಂಬಾ ಕೊಟ್ಟ ಮಜೂರಿ ಮತ್ತು ವಿಶೇಷ ಮಜೂರಿಯೂ ಕೃತಕ ಕಾಲು ತರಿಸಲು ಭರಿಸಿದ್ದಾಗಿದೆ. ಇಂದು ಭೀಮವ್ವ ಬಾಗಿಲಿನ ಬಳಿ ಕುಳಿತುಕೊಂಡಿದ್ದಳು, ಯಾರಲ್ಲೂ ದಂಗೆಯೇಳುವ ಮಾತೇ ಇಲ್ಲ. ಜಾತ್ರೆಗೋ, ಹಬ್ಬಡ ಸಡಗರಕ್ಕೋ ಹೋಗುವಂತಹಾ ದರ್ದು ಕಾಣುತ್ತಿಲ್ಲ. ಒಂದೇ ಮೂಗುದಾರದಲ್ಲಿ ನೂರಾರು ರಾಸುಗಳ ಮೂಗುಗಳಿಗೆ ತೂರಿಸಿ ಎಳೆದು ಕಟ್ಟಿದಂತೆ ಒಬ್ಬರಿಗೊಬ್ಬರು ಜೋತುಬಿದ್ದಿದ್ದರು. ನಸುಕಿನಿಂದ ದುಡಿದು ದಣಿದ ದೇಹಗಳು ಮತ್ತೊಂದು ಕೆಲಸಕ್ಕೆ ಸಜ್ಜುಗೊಂಡಿದ್ದವು. ಇಷ್ಟೊತ್ತಿಗೆ ಅಲ್ಲಲ್ಲಿ ನಕ್ಷತ್ರಗಳ ಮಿಂಚು, ಜೊತೆಗೆ ಚಂದಿರನ ಹೃದಯ ಕೋರೈಸುವ ಪ್ರಖರ ಬೆಳಕು; ಮೃತ ಬದುಕನ್ನು ಜೀವಂತಗೊಳಿಸುವ ಪುಲಕ ಹುಟ್ಟಿಸುತ್ತದೆ. ಕೈ ಚೆಲ್ಲಿದ ಬದುಕು, ಅತಂತ್ರ